ಕತೆ



ಮೂಲ: **ಜೇನ್ ಪಾಲ್ ಸಾರ್ತ್ರೆ**

ಕನ್ನಡಕ್ಕೆ : **ಆರ್. ಲಕ್ಷ್ಮೀನಾರಾಯಣ**

ಕಲೆ: ಮುರಳೀಧರ ರಾಠೋಡ್



ಲಂಡನ್ ಕೋರ್ಟ್ ಮುಂದೆ ನಾಳೆ ಒಂದು ಅಸಾಧಾರಣವಾದ ಮೊಕದ್ದಮೆ ಬರಲಿದೆ. ಅಪರಾಧಿಯ ವಿಷಯದಲ್ಲಿ ಯಾವುದೇ ಸಂಶಯ–ಸಂದೇಹಗಳಿಲ್ಲ. ಅದೂ ಅಲ್ಲದೆ ಅವರು ಮೊಕದ್ದಮೆಯಲ್ಲಿ ಗೆದ್ದುಬಿಡುತ್ತಾರೆ. ಇದರಲ್ಲಿ ಯಾವ ಅನುಮಾನವೂ ಇಲ್ಲ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಈ ಅಸಾಧಾರಣ ಪ್ರಕರಣದ ವಿವರಗಳು ಹೀಗಿವೆ:

ಮೇ 20ನೇ ತಾರೀಕಿನ ಸಂಗತಿ. ಲಂಡನ್ನಿನ ಸುಪ್ರಸಿದ್ಧ ಪುಪ್ಪುಸ ರೋಗದ ವಿಶೇಷತಜ್ಞ ಡಾ. ಹೆಲಿಡನ್ ಹಿಲ್‌ನ ಎರಡೂ ಡ್ರಾಯಿಂಗ್ ರೂಮ್‌ಗಳು ರೋಗಿಗಳಿಂದ ತುಂಬಿವೆ. ಪ್ರತಿಯೊಬ್ಬ ರೋಗಿಯ ಕೈಯಲ್ಲಿ ಒಂದು ಕಾರ್ಡ್ ಇದೆ. ಅದರಲ್ಲಿ ನಂಬರ್ ಅನ್ನು ಬರೆಯಲಾಗಿದೆ. ರೋಗಿಗಳ ಗುಂಪಂತೂ ಪ್ರತಿದಿನವೂ ಹೀಗೇ ಇರುತ್ತೆ. ಕಾರಣ ನೂರಾರು ಕ್ಷಯ ರೋಗಿಗಳನ್ನು ಪೂರ್ತಿಯಾಗಿ ಗುಣಪಡಿಸಿದ ಕೀರ್ತಿ ಡಾ. ಹಿಲ್ ಅವರಿಗೆ ಸಲ್ಲುತ್ತದೆ. ರೋಗ ಪತ್ತೆ ಮಾಡುವ ಭವನದ ಸುತ್ತಲೂ ಗಾಜಿನ ಕಿಟಕಿಗಳು ಮತ್ತು ಬಾಗಿಲ ಮೇಲೆ ಹಾರಾಡುವ ಚೀನೀ ರೇಷ್ಮೆಯ ಪರದೆ ಇದೆ. ಒಳಗಿನ ಗೋಡೆಗೆ ಅಂಟಿಕೊಂಡಂತೆ ದೊಡ್ಡ ದೊಡ್ಡ ಜಪಾನೀ ಹೂವಿನ ಕುಂಡಗಳನ್ನು ಇಡಲಾಗಿದೆ. ಅವುಗಳಲ್ಲಿ ಉಷ್ಣ ದೇಶಗಳಲ್ಲಿ ಬೆಳೆಯುವ ಋತುವಿಗೆ ತಕ್ಕ ಬಣ್ಣ ಬಣ್ಣದ ಹೂ ಬಿಡುವ ಸಸಿಗಳನ್ನು ಕ್ರಮವಾಗಿ ನೆಡಲಾಗಿದೆ. ಇವೆಲ್ಲದರ ಮಧ್ಯದಲ್ಲಿ ಒಂದು ದೊಡ್ಡ ಸುಸಜ್ಜಿತವಾದ ಟೇಬಲ್ ಇದೆ. ಅದರ ಎದುರು ಡಾ. ಹಿಲ್ ಈಗ ತಾನೆ ಬಂದು ಕುಳಿತಿದ್ದಾರೆ. ಮುಖದ ಮೇಲೆ ಸುಖ ಮತ್ತು ಸಂತಸದ ಗೆರೆಗಳು, ಕಣ್ಣಿನಲ್ಲಿ ದರ್ಪ ಮತ್ತು ಹೊಳಪು ಇದೆ. ಅವರೆದುರು ಅವರ ಸಹಾಯಕ ಕುಳಿತಿದ್ದಾನೆ. ವೈದ್ಯರು ಹೇಳಿದಂತೆ ಅಲ್ಲಿಗೆ ಬರುವ ರೋಗಿಗಳ ಸಂಕ್ಷಿಪ್ತ ಇತಿಹಾಸವನ್ನು ಷಾರ್ಟ್ ಹ್ಯಾಂಡ್‌ನಲ್ಲಿ ಬರೆದುಕೊಳ್ಳುತ್ತಾನೆ. ರೋಗನಿದಾನ ಕೋಣೆಯ ಪ್ರವೇಶ ದ್ವಾರದಲ್ಲಿ ಮೆಟ್ಟಿಲುಗಳ ಮೇಲೆ ಡಾ. ಹಿಲ್ ಅವರ ಆಳು (ಆರ್ಡರ್ಲಿ) ಕೆಂಪು ಮಖಮಲ್ಲಿನ ಪೋಷಾಕು, ಹೊಳೆಯುತ್ತಿರುವ ತಲೆಗೂದಲು, ಬಿಲ್ಲೆ ಗುರುತು ಇರುವ ಟೋಪಿ, ಬಲಗೈನ ಎರಡೂ ಬೆರಳುಗಳಲ್ಲಿ ಚಿನ್ನದ ಉಂಗುರಗಳನ್ನು ಧರಿಸಿಕೊಂಡು ನಿಂತಿದ್ದಾನೆ. ಅವನ ಒಂದು ಮಣಿಕಟ್ಟಿನಲ್ಲಿ ಶಿಲುಬೆ ಏರಿರುವ ಏಸುವಿನ ಹಚ್ಚೆ ಇದೆ. ಇನ್ನೊಂದರಲ್ಲಿ ಸುಂದರಿಯ ಬೆತ್ತಲೆ ಚಿತ್ರದ ಹಚ್ಚೆ ಇದೆ. ಅವನ ಡ್ಯೂಟಿ ಎಂದರೆ ಡಾಕ್ಟರ್ ಹೇಳುತ್ತಿದ್ದಂತೆಯೇ ಟೆಸ್ಟ್